ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 29.08.2024.

**ಪಾಟೀ ಸವಾಲುಃ** ವಾದಿಯರ ಪರ ಶ್ರೀ ವಿ.ಡಿ.ಕೆ. ವಕೀಲರಿಂದಃ

ನಾನು ಬಿಕಾಂ ಪದವಿದರ ಇರುತ್ತೇನೆ. ನಾನು ಪುಸ್ತಕ ವ್ಯಾಪಾರಿ ಹಾಗೂ ನನ್ನ ಸ್ವಂತ ಅಂಗಡಿ ಇರುತ್ತದೆ. ನನ್ನ ಮೂಲ ಗ್ರಾಮ ಮಾಡಿಯಾಳ್ ಇರುತ್ತದೆ. ವೈಜಾಪುರ ಗ್ರಾಮದಲ್ಲಿ ನನ್ನ ತಂದೆಯ ಅಕ್ಕ ಸುಶೀಲಾ ಬಾಯಿ ಇರುತ್ತಾರೆ. ಅದೇ ಗ್ರಾಮಕ್ಕೆ ನನ್ನ ಅತ್ತೆಯನ್ನು ಮದುವೆ ಮಾಡಿಕೊಟ್ಟಿರುತ್ತೇವೆ, ಆದರೆ ನನ್ನ ಅತ್ತೆ ಹುಟ್ಟಿದ ಊರು ಮಾಡಿಯಾಳ್ ಇರುತ್ತದೆ. ನನ್ನ ಅತ್ತೆ ಮದುವೆಯಾಗಿ ಸುಮಾರು 50-60 ವರ್ಷವಾಗಿಬರಹುದು, ಅವರು ಜೀವಂತ ಇದ್ದಾರೆ. ನನ್ನ ಅತ್ತೆ ಅಲ್ಲಿ ಇರುವ ಕಾರಣ ನಾನು ಹೋಗುವುದು ಬರುವುದು ಮಾಡುತ್ತೇನೆ. ವೈಜಾಪುರ ಗ್ರಾಮದಲ್ಲಿ ನಮಗೆ ಸಂಬಂಧಪಟ್ಟ ಯಾವುದೇ ಮನೆಗಳು ಇರುವುದಿಲ್ಲ. ನನ್ನ ಅತ್ತೆಯನ್ನು ಹೊರತುಪಡಿಸಿ ವೈಜಾಪುರ ಗ್ರಾಮದಲ್ಲಿ ಯಾರು ಇರುವುದಿಲ್ಲ. ಸದ್ಯ ನನಗೆ ವಯಸ್ 45 ವರ್ಷ ಇರುತ್ತದೆ.

ವೈಜಾಪುರ ಗ್ರಾಮದಲ್ಲಿರುವ ಜಮೀನು ನನಗೆ ನನ್ನ ಅತ್ತೆಯ ಮಗನಾದ ನೀಲಕಂಠ ರಾವ್ ರವರಿಂದ ಗೊತ್ತಾರುತ್ತದೆ. ನಾನು ದಾವಾ ಜಮೀನುಗಳ ಪೈಕಿ ಸರ್ವೆ ನಂ.16/6ನ್ನು ಕ್ರಯ ಪತ್ರದ

ಮುಖಾಂತರ 2002ರಲ್ಲಿ ಖರೀದಿ ಮಾಡಿರುತ್ತೇನೆ, ಆ ಕಾಲಕ್ಕೆ 23 ವರ್ಷ ವಯಸ್ ಇತ್ತು. ಆಗ ನಾನು ವಿದ್ಯಾಭ್ಯಾಸ ಮತ್ತು ಅಂಗಡಿ ನೋಡಿಕೊಳ್ಳುತ್ತಿದ್ದೆ. ನಮ್ಮ ಪುಸ್ತಕದ ಅಂಗಡಿ ನನ್ನ ತಂದೆಯ ಕಾಲದಿಂದ ಇರುತ್ತದೆ. ನಾನು 12 ಎಕರೆ 6 ಗುಂಟೆಯನ್ನು 2 ಕ್ರಯ ಪತ್ರಗಳ ಮುಖಾಂತರ ಖರೀದಿಸಿರುತ್ತೇನೆ. ನಾನು ಮತ್ತು ನನ್ನ ತಮ್ಮ ಅಂದರೆ 9ನೇ ಪ್ರತಿವಾದಿ ಇಬ್ಬರು ಕೂಡಿ ದಿಃ 22.04.2002ರಂದು ಖರೀದಿಸಿರುತ್ತೇವೆ. ಖರೀದಿ ಪತ್ರಕ್ಕಿಂತ ಮುಂಚೆ ಖರೀದಿಸಿ ಜಮೀನುಗಳ ಬಗ್ಗೆ ವಿಚಾರಣೆ ಮಾಡಿರುತ್ತೇವೆ.

ನಾವು ಖರೀದಿಸಿ ಜಮೀನುಗಳು ಮೂರು ಜನ ಮಕ್ಕಳಾದ 1ನೇ ಪ್ರತಿವಾದಿ ಗಂಡ ಅಮೀರ್ ಅಲಿ, 6 ಮತ್ತು 7ನೇ ಪ್ರತಿವಾದಿಯರ ಹೆಸರಿನಲ್ಲಿ ಇದ್ದವು. ಮೇಲೆ ಹೇಳಿದವರಿಗೆ ಖರೀದಿಸಿದ ಜಮೀನುಗಳು ಹೇಗೆ ಬಂದವು ಎಂದರೆ, ಸಾಕ್ಷಿ ತಮ್ಮ ತಂದೆಯವರಿಂದ ವಿಭಾಗ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಖರೀದಿಸುವುಕ್ಕಿಂತ ಮುಂಚೆ ವಿಭಾಗ ಆಗಿದ್ದರ ಬಗ್ಗೆ ತಹಶಿಲ್ದಾರ ಕಛೇರಿಯಲ್ಲಿ ಹೋಗಿ ದಾಖಲೆ ಪರಿಶೀಲನೆ ಮಾಡಿರುತ್ತೇವೆ, ಪಹಣಿಗಳನ್ನು ತೆಗೆದುಕೊಂಡಿರುತ್ತೇನೆ, ಆದರೆ ವಿಭಾಗದ ಬಗ್ಗೆ ಯಾವುದೇ ದಾಖಲೆ ಪಡೆದುಕೊಂಡಿಲ್ಲ. ಈ ದಾವೆಯನ್ನು ನಮ್ಮ ವಿರುದ್ಧ ಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈ ದಾವೆಯಲ್ಲಿಯ ನೋಟೀಸ್ ಬಂದ ನಂತರ ದಾಖಲೆಗಳನ್ನು ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ. ಸದರಿ ದಾಖಲೆ ಕೊಟ್ಟಾಗ ನಮ್ಮ ವಕೀಲರು ಕೇಸ್ ಯಾರು ಮಾಡಿರುತ್ತಾರೆ ಏನು ಎಂಬುವುದರ ಬಗ್ಗೆ ನಮಗೆ ಹೇಳಿರುತ್ತಾರೆ.

ದಾವೆ ದಾಖಲೆಗಳನ್ನು ಪರಿಶೀಲಿಸಿದ ನಂತರ ನಾವು ದಾಖಲೆಗಳನ್ನು ಪಡೆದುಕೊಂಡು, ನಾವು ನಮ್ಮ ವಕೀಲರಿಗೆ ಮಾಹಿತಿ ಕೊಟ್ಟು ನಮ್ಮ ಪ್ರತಿವಾದ ಪತ್ರ ಸಲ್ಲಿಸಿರುತ್ತೇವೆ. ಖರೀದಿ ಕಾಲಕ್ಕೆ ನಾವು ದಾವಾ ಸ್ವತ್ತುಗಳ ಇಸಿಯನ್ನು ಪಡೆದುಕೊಂಡಿರುತ್ತೇನೆ, ಅವುಗಳನ್ನು ನ್ಯಾಯಾಲಯಕ್ಕೆ

ಹಾಜರುಪಡಿಸಿಲ್ಲ. ನಾನು ದಾವಾ ಜಮೀನುಗಳನ್ನು ಖರೀದಿಸುವುಕ್ಕಿಂತ ಮುಂಚೆ ಸದರಿ ಜಮೀನಿಗೆ ಯಾರದ್ದು ಆದರೂ ತಕಾರು ಇದೆಯೇ ಎಂದು ಸಾರ್ವಜನಿಕ ಜಾಹಿರ ನೋಟಿಸ್‌ನ್ನು ದಿನಪತ್ರಿಕೆಗಳಲ್ಲಿ ಪ್ರಕಟಣೆ ಮಾಡಿರುವುದಿಲ್ಲ. 6ನೇ ಪ್ರತಿವಾದಿ ನನಗೆ ಗೊತ್ತಿರುತ್ತಾರೆ, ಅವರ ತಂದೆ ಹೆಸರು ಮೌಲಾಸಾಬ ಇರುತ್ತದೆ. ಮೌಲಾಸಾಬ ರವರಿಗೆ ಎಷ್ಟು ಜನ ಹೆಣ್ಣು ಮಕ್ಕಳು ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮೌಲಾಸಾಬ ರವರಿಗ ಮೂರು ಜನ ಗಂಡು ಮಕ್ಕಳು ಇರುತ್ತಾರೆ, ಅದು ಕೂಡಾ ಮ್ಯೂಟೇಷನ್ ಪ್ರಕಾರ ನೋಡಿ ಖರೀದಿಸಿರುತ್ತೇನೆ.

ನಾನು ಖರೀದಿಸುವುಕ್ಕಿಂತ ಮುಂಚೆ ಅಮೀರ್ ಅಲಿಗೆ ಎಷ್ಟು ಜನ ಗಂಡು ಮಕ್ಕಳು ಇರುತ್ತಾರೋ ಮತ್ತು ಎಷ್ಟು ಜನ ಹೆಣ್ಣು ಮಕ್ಕಳು ಇರುತ್ತಾರೆ ಎಂಬುವುದನ್ನು ನಾನು ವಿಚಾರಣೆ ಮಾಡಿಲ್ಲ. ಅದೇ ರೀತಿ ಸಂಬಂಧಪಟ್ಟ ಕಛೇರಿಯಿಂದ ಮೌಲಾಬಸಾಬ ರವರ ವಾರಸುದಾರರ ವಂಶಾವಳಿಯನ್ನು ನನ್ನ ಮಾರಾಟಗಾರರಿಂದ ಪಡೆದುಕೊಂಡಿಲ್ಲ. ನಾನು ದಾವಾ ಜಮೀನನ್ನು ಖರೀದಿಸುವ ಕಾಲಕ್ಕೆ ಅಮೀರ ಅಲಿ, ಜಮೀರ್ ಅಲಿ ಹಾಗೂ ಅಜ್ಗರ ಅಲಿ ರವರ ವಯಸ್ ಸುಮಾರು 20-25 ವರ್ಷ ಇತ್ತು. ನಾನು ಖರೀದಿ ಕಾಲಕ್ಕೆ ಅಮೀರ್ ಅಲಿ ಮತ್ತು 6, 7ನೇ ಪ್ರತಿವಾದಿಯರ ಪಡಿತರ ಚೀಟಿ ಹಾಗೂ ಗುರುತಿನ ಚೀಟಿಗಳನ್ನು ನೋಂದಣಿ ಕಛೇರಿಗೆ ಹಾಜರುಪಡಿಸಿರುತ್ತೇನೆ.

ನಿಡಿ-5 ಮತ್ತು 6ರ ಜೊತೆ ನಾನು ಸಲ್ಲಿಸಿದ ಪಡಿತರ ಚೀಟಿ ಮತ್ತು ಗುರುತಿನ ಚೀಟಿ ಇಲ್ಲ ಎಂದರೆ ಸರಿ. ನಾನು ಹಾಜರುಪಡಿಸಿದ ಕ್ರಯ ಪತ್ರಗಳು ದೃಢಿಕೃತ ನಕಲು ಆಗಿದ್ದು, ಮೂಲು ಪ್ರತಿಗಳನ್ನು ಬ್ಯಾಂಕಿಗೆ ಹಾಜರಪಡಿಸಿರುತ್ತೇನೆ. ನಾವು ಖರೀದಿಸಿ ಜಮೀನುಗಳ ಮೂಲ ಮಾಲಿಕ ಮೌಲಾಸಾಬ ಇದ್ದರು. 6 ಮತ್ತು 7ನೇ ಪ್ರತಿವಾದಿಯರ ತಾಯಿಯ ಹೆಸರು ನನಗೆ ಗೊತ್ತಿಲ್ಲ. ಅಮೀರ್ ಅಲಿ ತಾಯಿಯ ಹೆಸರು ಕೂಡಾ ಗೊತ್ತಿಲ್ಲ. 6 ಮತ್ತು 7ನೇ ಪ್ರತಿವಾದಿಯರು ಮೌಲಾಸಾಬನ ಮಕ್ಕಳು ಇರುತ್ತಾರೆ ಎಂದು ನಮ್ಮ ಮಾವನವರಿಂದ ತಿಳಿದುಕೊಂಡು ಮತ್ತು ಮ್ಯೂಟೇಷನ್‌ಗಳನ್ನು ನೋಡಿ

ಅವರ ಮಕ್ಕಳು ಇರುತ್ತಾರೆ ಎಂದು ಹೇಳುತ್ತಿದ್ದೇನೆ. ದಾವಾ ಜಮೀನನ್ನು ಖರೀದಿಸುವುದಕ್ಕಿಂತ ಮುಂಚೆ ಮಾತುಕತೆಯಾಗಿತ್ತು ಎಂದರೆ ಸರಿ. ಸದರಿ ಮಾತುಕತೆ ಕಲುಬಗಿಯಲ್ಲಿ ನನ್ನ ಅಂಗಡಿಯಲ್ಲಿ ಆಗಿತ್ತು. ಆಗ ನನ್ನ ಮಾವ ನೀಲಕಂಠ ರಾವ್, ಮೌಲಾಸಾಬ, ನನ್ನ ತಂದೆ ರವರು ಹಾಜರಿದ್ದರು. ಸದರಿ ಮಾತುಕತೆ ಕಾಲಕ್ಕೆ ಎಕರೆಗೆ ರೂ.41,000/- ಕ್ಕೆ ಮಾರಾಟ ಮಾಡಬೇಕೆಂದು ಹಾಗೂ ಒಟ್ಟು ರೂ.5 ಲಕ್ಷ ಕ್ಕೆ ಮಾರಾಟ ಮಾಡಬೇಕೆಂದು ಮಾತುಕತೆಯಾಗಿತ್ತು. ಮಾತುಕತೆ ಕಾಲಕ್ಕೆ ದಾಖಲೆ ಬರೆಯುತ್ತಾರೆ ಎಂದರೆ ಸಾಕ್ಷ ಏನು ಬರೆದಿಲ್ಲ ಎಂದು ನುಡಿಯುತ್ತಾರೆ.

ಮಾತುಕತೆಯಾಗಿ ಸ್ವಲ್ಪ ಹಣ ಕೊಟ್ಟ ಉಳಿದ ಹಣ ಕೊಡುವ ಕರಾರು ಮಾಡಿಕೊಳ್ಳುತ್ತಾರೆ ಎಂದರೆ, ಸಾಕ್ಷಿ ಆ ರೀತಿ ಮಾಡಿಕೊಂಡಿಲ್ಲ ಎಂದು ನುಡಿಯುತ್ತಾರೆ. ಮೌಲಾಸಾಬ ರವರು ನಮ್ಮ ಹತ್ತಿರ ಬಂದು ಜಮೀನು ಮಾರಾಟ ಮಾಡುವುದು ಇದೆ ಎಂದು ಹೇಳಿದ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ. ಅದಕ್ಕೆ ಆತ ಸಹಿ ಮಾಡಿಕೊಟ್ಟ ದಾಖಲೆ ನಮ್ಮ ಹತ್ತಿರ ಇಲ್ಲ ಎಂದರೆ ಸರಿಯಲ್ಲ. ರೂ.5 ಲಕ್ಷ ಕೊಟ್ಟ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸಾಕ್ಷಿ ಮುಂದುವರೆದು ಉಳಿದ ಹಣ ರೂ. 5 ಲಕ್ಷ ಹಣವನ್ನು ಕೊಟ್ಟು ನೋಂದಣಿ ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಆ ರೀತಿ ಕ್ರಯಪತ್ರಗಳಲ್ಲಿ ಬರೆದಿಲ್ಲ ಎಂದರೆ ಸರಿ. ನೋಂಂದಣಿ ದಿನ ನಾವು ರೂ.5 ಲಕ್ಷ ಹಣವನ್ನು ಮೌಲಾಸಾಬ ಆಗಲಿ, ಅಮೀರ್ ಅಲಿ ಆಗಲಿ, 6 ಮತ್ತು 7ನೇ ಪ್ರತಿವಾದಿಯರಿಗೆ ಆಗಲಿ ಕೊಟ್ಟಿದೆ ಎಂದು ಪ್ರತ್ಯಕೆ ರಶೀದಿ ಬರೆದಿಲ್ಲ ಎಂದರೆ ಸರಿ.

ಮೌಲಾಸಾಬ ಆಗಲಿ, ಅಮೀರ್ ಅಲಿ ಆಗಲಿ, 6 ಮತ್ತು 7ನೇ ಪ್ರತಿವಾದಿಯರು ಆಗಲಿ ಜಮೀನು ಮಾರಾಟ ಮಾಡುತ್ತೇವೆ ಎಂದು ನನ್ನ ಹತ್ತಿರ ಬಂದಿಲ್ಲ ಎಂದರೆ ಸರಿಯಲ್ಲ. 6 ಮತ್ತು 7ನೇ ಪ್ರತಿವಾದಿಯರು ಮೌಲಾಸಾಬನ ಮಕ್ಕಳು ಇರುತ್ತಾರೆ ಎಂದು ತೋರಿಸುವ ಸಲುವಾಗಿ ನಾನು ಖರೀದಿಸುವುಕ್ಕಿಂತ ಮುಂಚಿನ ದಾಖಲೆಗಳನ್ನು ನಾನು ಮುಂದೆ ಹಾಜರುಪಡಿಸುತ್ತೇನೆ. 6 ಮತ್ತು 7ನೇ

ಪ್ರತಿವಾದಿಯರು, ಮೌಲಾಸಾಬನಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 6 ಮತ್ತು 7ನೇ ಪ್ರತಿವಾದಿಯರು ದಾವಾ ಸ್ವತ್ತಿಗೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 6 ಮತ್ತು 7ನೇ ಪ್ರತಿವಾದಿಯರಿಗೆ ನಾನು ಖರೀದಿಸುವುಕ್ಕಿಂತೆ ಮುಂಚೆ ಅವರು ಯಾವ ರೀತಿ ಟೈಟಲ್ ಹೊಂದಿದ್ದರು ಎಂದು ಕೇಳಿದ ಪ್ರಶ್ನೆಗೆ, ಸಾಕ್ಷಿ ಮ್ಯೂಟೇಷನ್ ಅವರ ಹೆಸರಿನಲ್ಲಿ ಇತ್ತು ಮತ್ತು ಮೌಲಾಸಾಬ ಸ್ವಂತ ಖರೀದಿಸಿದ ಸ್ವತ್ತು ಇತ್ತು ಎಂದು ನುಡಿಯುತ್ತಾರೆ.

6 ಮತ್ತು 7ನೇ ಪ್ರತಿವಾದಿಯರು ಮೌಲಾಸಾಬನ ಮಕ್ಕಳು ಇರದೇ ಇರುವ ಕಾರಣ ಅವರು ನನಗೆ ಜಮೀನು ಮಾರಾಟ ಮಾಡುವ ಯಾವುದೇ ಹಕ್ಕನ್ನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. 6 ಮತ್ತು 7ನೇ ಪ್ರತಿವಾದಿಯರ ಹೆಸರಿನಲ್ಲಿ ಆದ ಮ್ಯೂಟೇಷನ್ ವಾದಿಯರು ಹಕ್ಕಿಗೆ ಬಂಧನಕಾರಿಯಾಗುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತುಗಳನ್ನು ಖರೀದಿಸುವ ಪೂರ್ವದಲ್ಲಿ ಬ್ಯಾಂಕಿನಿಂದ ಸಾಲ ಪಡೆದು ಖರೀದಿಸಿಲ್ಲ. ನಿಡಿ-34ರ ದಾಖಲೆಯನ್ನು ಬ್ಯಾಂಕಿನಿಂದ ಸಾಲ ಪಡೆದಾಗ ಅಂದರೆ ದಿಃ 17.07.2007 ರಂದು ಮಾಡಿದ್ದೇವು ಎಂದು ನುಡಿಯುತ್ತಾರೆ. ನಿಡಿ-34ರ ದಾಖಲೆ 2002ರ ನಂತರದ್ದು ಆಗಿವೆ ಎಂದರೆ ಸರಿ. ನಾನು ಹಾಜರುಪಡಿಸಿದ ಸಕ್ಕರೆ ಕಾರ್ಖಾನೆ ರಿಶೀದಿಗಳಲ್ಲಿ ಸರ್ವೆ ನಂಬರ ಇಲ್ಲ, ಆದರೆ ಹೆಸರು ಇದೆ. ನಾನು ಹಾಜರುಪಡಿಸಿದ ರಶೀದಿಗಳಿಗೂ ಮತ್ತು ದಾವಾ ಸ್ವತ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ನಿಡಿ-88 ರಿಂದ 105ರ ಬ್ಯಾಂಕ್ ದಾಖಲಾತಿಗಳು ಬೇರೆ ಜಮೀನುಗಳ ಕಬ್ಬು ಕಳಹಿಸಿದಾಗ ಬ್ಯಾಂಕಿನವರು ನನ್ನ ಖಾತೆಗೆ ಹಣ ಹಾಕಿದ್ದು ಆಗಿರುತ್ತವೆ ಎಂದರೆ ಸರಿಯಲ್ಲ. ಕಬ್ಬಿನ ಕಾರ್ಖಾನೆಗಳು ಯಾರದಾರೂ ಶೇರ್ ಹೊಲ್ಡರ್ ಇಲ್ಲದೇ ಇರುವ ಕಾಲಕ್ಕೆ, ಶೇರ್ ಇದ್ದವರ ಹೆಸರಿನಲ್ಲಿ ಹಣವನ್ನು ಅವರ ಖಾತೆಗೆ ಜಮೆ ಮಾಡುತ್ತಾರೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ದಾಖಲೆಗಳು ಅಂತಹ ರಶೀದಿಗಳು ಆಗಿರುತ್ತವೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ವಾದಿಯರ ಪರ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**